A6/16
13

Weekly SATYAVADI Founded 1971

Regd No. M. 1299

ವಾರಪತ್ರಿಕೆ ೬ ಕಾಸು

ಸಂಚಿಕೆ 26) ಶನಿವಾರ 16—1—1943 (ಸಂಪುಟ 84

ಎಸ್. ವಿ. ಶೆಣೈರವರ
ಮಂಗಳೂರು ಗಜಾನನ
ಬೀಡಿಗಳನ್ನೇ ಉಪಯೋಗಿಸಿ
ಒಳ್ಳೇ ನಿಷ್ಪಾಣಿ ಹೊಗೆಸೊಪ್ಪಿನಿಂದಲೇ ತಯಾರಿಸಿದ ಈ ಬೀಡಿಯನ್ನು ಒಂದೆಾವ ರ್ತಿ ಉಪಯೋಗಿಸಿದರೆ ಖಂಡಿತವಾಗಿ ನಿಮ್ಮನ್ನು ಆಕರ್ಷಿಸುವುದು.
ಎಲ್ಲೆಲ್ಲಿಯೂ ಏಜೆಂಟರ್ಸ್ ಬೇಕು.
ವಿವರಗಳಿಗೆ— ಪಿ. ಮಂಜಪ್ಪ,
ಹಳೇ ಅಗ್ರಹಾರ ಮೈಸೂರು

ಎಂ. ಎಲ್. ಎಂ. ಎಸ್ & ಎಸ್
ಮಂಗಳೂರು ಸುವರ್ಣ
ಸ್ಪೆಷಲ್ ಬೀಡಿಯನ್ನೇ
ಉಪಯೋಗಿಸಿ. ಒಳ್ಳೇ ನಿಷ್ಪಾಣಿ ಹೊಗೆಸೊಪ್ಪಿನಿಂದ ತಯಾರಿಸಿರುತ್ತೆ. ಒಂದಾವರ್ತಿ ಪರೀಕ್ಷಿಸಿ ನೋಡಿ.
ಮೈಸೂರು ಏಜೆಂಟರು, ಪಿ. ಮಂಜಪ್ಪ
ಬೇರೆ ಸ್ಥಳಗಳಿಗೆ ಏಜೆಂಟರು ಬೇಕು.

ಜರ್ಮನರಿಗೆ ಅಹುತಿ

ಜರ್ಮನಿಯವರ ಹೇಳಿಕೆ ಪ್ರಕಾರ ಜರ್ಮನಿಯರು ಕೈಹಾರ ಕೊಂದಿರುವವರ ಸಂಖ್ಯೆ—

ಯುಗೋಸ್ಲೋವಿಯ	....	2,897
ಹಾಲೆಂಡ್	....	172
ಜೆಗೋಸ್ಲೋವಿಕಾ	....	1,391
ಬೆಲಜಿಯಂ	....	122
ಪೋಲಂಡ್	....	1,091
ನಾರ್ವೆ	....	92
ಫ್ರಾನ್ಸ್	....	977
ರೊಮೆನಿಯ	....	81
ಗ್ರೀಸ್	....	405
ಹಂಗೇರಿ	....	29
ಬಲಗೇರಿಯಾ	....	199
ಸ್ಪೇನ್, ಇಟಲಿ	....	619

ಪೋಲಂಡ್ ಸರ್ಕಾರ (ಲಂಡನ್ನಲ್ಲಿರುವ) 320,000 ಪೋಲಾಂಡರನ್ನು ಜರ್ಮನಿಯವರು ಕೈಹಾರ ಕೊಂದಿರುವರೆಂದು ಹೇಳಿರುವುದು. ತಿನ್ನುವುದಕ್ಕೆ ಇಲ್ಲದೆ 3 00000 ಗ್ರೀಕರು ಪ್ರಾಣಬಿಟ್ಟರೆಂದು ತಿಳಿದು ಬರುತ್ತೆ.

ಚಿನ್ನದಂತಹ ಮನುಷ್ಯ

ಲಿವರ್‌ಪೂಲಿನಲ್ಲಿ ತನ್ನ 102 ನೇ ವರ್ಷದಲ್ಲಿ ಒಬ್ಬನು ಕಾಲವಾದನು. ಇವನು ತನ್ನ ಜೀವಮಾನದಲ್ಲಿ ಕ್ಷೌರಮಾಡಿಸಿಕೊಂಡಿರಲಿಲ್ಲ. ಮಾಂಸಹಾರ ಮಾಡಿದವನಲ್ಲ, ಸಾರಾಯಿ ಕುಡಿದವನಲ್ಲ. ಒಂದು ಚುಟ್ಟಾ ಸಹಾ ಸೇವಿಸಿದವನಲ್ಲ. ಇವನು ಲಕ್ಷಾಧಿಕಾರಿಯು ಆಗಿದ್ದನೇಕೆ ಫೀಲ್ಟಗೆ ಸಮಾಪ ಬಂದು.

ವಿ॥ ಫಿಲಿಫ್ಸ್‌ನವರ್ತೆಯವರ ಹೇಳಿಕೆ

ವ್ಯಾಪಾರವನ್ನು ಇಷ್ಟಕ್ಕೆ ಮಾಡಬೇಕೆಂದೂ ಸರ್ಕಾರದವರು ಸಿಗದು ಮಾಡಿರುವುದರಿಂದ, ವ್ಯಾಪಾರದಲ್ಲಿ ಮೋಸ ನಡೆಯುವುದಕ್ಕೆ ಅರಂಭಿಸುತ್ತದೆಯೋ ಹೊರತು ಇದರಿಂದ ಪ್ರಯೋಜನವಿಲ್ಲವೆಂದು ವಿ॥ ಫಿಲಿಫ್ಸ್‌ನವರ್ತೆಯವರು ಹೇಳಿದರು. ಇವರು ಅಮೇರಿಕಾದ ಇಂಡಸ್ಟ್ರೀಯಲ್ ಆರ್ಗನೈಜೇಷನ್ನಿನ ಪ್ರೆಸಿಡೆಂಟರು.

ಅಮೇರಿಕಾ ಸಾಹಸ

ಒಂದು ನೆಲಬಲ ಹಡಗು, 117 ನೆಲಬಲ ಉದ್ದ ಇಷ್ಟಕ್ಕೆ 185 000 ಏರೋಪ್ಲೇನ್ ಬೇಕಾಗುತ್ತದೆ ಇಷ್ಟನ್ನೂ ಅಮೇರಿಕಾದವರು ಎರಡು ವರ್ಷಗಳಲ್ಲಿ ತಯಾರಿಸುವರೆಂದು ಹೇಳಲಾಗಿದೆ

ಕಲ್ಕತ್ತಾದಿಂದ ಟೋಕಿಯೋಗೆ 3353 ಮೈಲಿಗಳು. ಬಂದರ ಮಧ್ಯದಲ್ಲಿ ಒಂದರಂತೆ ಟ್ಯಾಂಕುಗಳನ್ನು ಜೋಡಿಸಲು 120 ಸಾವಿರ ಟ್ಯಾಂಕುಗಳು ಬೇಕು ಇಷ್ಟನ್ನು ಅಪೇಕ್ಷಕಾದನು ಎರಡು ವರ್ಷಗಳಲ್ಲಿ ತಯಾರಿಸುವರು.

ಟರ್ಕಿ ದೇಶದ ಪತ್ರಿಕೆಯವರು

ಟರ್ಕಿ ದೇಶದ ವರ್ತಮಾನ ಪತ್ರಿಕೆಯವರು ಶನಿವಾರ ಈ ದೇಶಕ್ಕೆ ಬಂದು ಒಂದು ತಿಂಗಳ ಕಾಲ ನಾನಾ ಪ್ರದೇಶಗಳಲ್ಲಿ ಸಂಚಾರ ಮಾಡುವರು. ಇವರು ಇಲ್ಲಿನ ವರ್ತಮಾನ ಪತ್ರಿಕೆಗಳನ್ನು ನೋಡಿ ಕಣ್ಣೀರು ಒರೆಸುವುದರಲ್ಲಿ ಸಂದೇಹವಿಲ್ಲ. ಇವರೆಲ್ಲಿರೂ ತಮತಮಗೆ ಬೇಕಾಗುವಷ್ಟು ಕಣ್ಣೀರನ್ನು ಒರಸಿಕೊಳ್ಳಲು ಟರ್ಕಿ ಟವಲುಗಳನ್ನು ತರುವರೆಂದು ತಿಳಿಯಬಹುದಲ್ಲವೇ ?

ಇದ್ದಲು ಗಣಿಯ ಧನನಂತರು

ಇಂಗ್ಲೆಂಡಿನ ಕಲ್ಲಿದ್ದಲು ಗಣಿಯು ಲೋಕಪ್ರಸಿದ್ಧಿಯಾದದ್ದು. ಇದರ ಮಾಲೀಕರು ಒಂದು ವರ್ಷಕ್ಕೆ ಎಷ್ಟು ಸಂಪಾದನೆ ಮಾಡುತ್ತಾರೆ ನೋಡಿ—ಲಾರ್ಡ್ ಬಂಟರು 15,00 000 ರೂಪಾಯಿ, ಲಾರ್ಡ್ ಹ್ಯಾಮಿಲ್‌ಟನ್ 150,00000 ರೂ. ಲಾರ್ಡ್‌ಡರ್‌ರೇವನ್ 770,000 ರೂ. ಲಾರ್ಡ್‌ಟ್ರೆಡಗೆರ್ 9 70,000 ರೂ. ಇಂಗ್ಲೆಂಡಿನ ಇಂಥಾ ಶ್ರೀಮಂತರು ರಷ್ಯಾ ಪದ್ಧತಿಯನ್ನನುಸರಿಸಲು ಆಗುತ್ತದೆಯೆ ?

ಪಾಲಿಸ್ಟೈನನ್ನು ಯೆಹೂದ್ಯರಿಗೆ ಮಾಸಲಾಗಬೇಕೆಂದು ವಿ॥ ರೂಸ್‌ವೆಲ್ಟರು ಯೋಚನೆ ಮಾಡುತ್ತಿರುವರು.

The Mysore State War Fund Lottery
(By kind permission of the Government of Mysore)
Three Lakhs of Tickets at Re 1 each on sale
from 22 nd November 1942 to 21 st March 1943.
Half the gross collections will be distributed as prizes
The Draw will take place on 13 th June 1943
If all the tickets are sold the **First Prize** will be Rs. 18.750
and the **Second Prize** Rs. 9,375.
There are 250 other prizes
For particulars, please apply to—
The Secretary, Mysore War Fund, Public Offices, Bangalore.

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ ; ನಮ್ಮ ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ. ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಯಾವನದಲ್ಲಾದರೂ ಮನುಷ್ಯನದಲ್ಲಿ ಕಾಡುವಷ್ಟು ಹಳೆದಾದ
ಆನುಶಂಕೆ — ಅತಿಸಾರಾದಿ ರೋಗಗಳನ್ನು
ಕ್ಷಣಮಾತ್ರದಷ್ಟು ಶೀಘ್ರವಾಗಿ ಪರಿಹರಿಸುವ
"ಡಿಸೆಂಟಿನ್ಸೆಡ್"
ಇದು ಏನು? ಹೇಗಿದೆ? ಎಂಬುದನ್ನು
ಇದರ ಒಂದು ಬಾರಿಯ ಪರೀಕ್ಷೆಯಿಂದ ಮನಗಾಣಿರಿ
ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ

ಈ ವಾರದ ಪತ್ತೇದಾರಿ ಕಥೆ

ಸುಂದರೇಶ

ಲೇಖಕರು—ಎಂ. ಎ ನಾರಾಯಣ, ಒಂಟಿಕೊಪ್ಪಲ್

ಅಧ್ಯಾಯ ೧

ಇದ್ದಕ್ಕಿದ್ದ ಹಾಗೆಯೇ ಢಂ, ಢಂ ಢಂ ಎಂದು ಗುಂಡಿನ ಶಬ್ದವು ಧರ್ಮಪುರಿಯಲ್ಲಿರುವ ಭಗವದತ್ತನ ಮನೆಯಲ್ಲಿ ಪ್ರವೇಶಿಸಿ ಹೊರಗೆಯೂ ಎಲ್ಲಾ ಕಡೆಗಳಿಂದಲೂ ಹೊರಕ್ಕೆ ಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಒಬ್ಬ ಯುವಕನು ಕಿಟ್ಟುವಾದ ಕಡೆಗೆ ಬರುತ್ತಿದ್ದನು. ಆ ಮನೆಯಲ್ಲಿಯಾದರೋ ನೂಕುನುಗ್ಗಲಾಗಿ ಜನಗಳು ತಾನು ಮುಂದೆ ನಾನು ಮುಂದೆ ಎಂದು ಹೊರಡುತ್ತಿದ್ದರು. ಆಗ ಬರುತ್ತಿದ್ದ ಯುವಕನು ಜನಸಂದಣಿಯನ್ನು ನೂಕಿಕೊಂಡು ಮನೆಯನ್ನು ನೋಡಿ ಭಯಚಕಿತನಾದನು. ಅವನ ಮುಖವು ಬಹಳ ದುಃಖದಿಂದ ಕೂಡಿತ್ತು. ಅವನು ಮನೆಯೆಲ್ಲಾ ಶೋಧಿಸುತ್ತಾ ಬರುವಾಗ ಮಹಡಿಯ ಮೇಲೆ ನರಳುತ್ತಾ ಬಿದ್ದಿರುವ ಭಗವದತ್ತನನ್ನು ಮಂಚದ ಮೇಲೆ ತಂದು ಮಲಗಿಸಿದನು. ಸ್ವಲ್ಪ ಹೊತ್ತಾದ ಮೇಲೆ ಭಗವದತ್ತನು ಚೇತರಿಸಿಕೊಂಡು ಅತ್ತಿತ್ತ ನೋಡುತ್ತಾ ಯುವಕನನ್ನು ನೋಡಿದನು. ವಾಚಕರೇ ಆ ಯುವಕನು ಯಾರೆಂಬುವನ್ನು ಬಲ್ಲಿರಾ? ಅವನೇ ನಮ್ಮ ಪ್ರಸಿದ್ಧನಾದ ಪತ್ತೇದಾರ ಸುಂದರೇಶನು.

ಆಗ ತಂದೆಯು, ಸುಂದರೇಶ ಬಾ, ಇಗೋ ನನಗೆ ಅಪಾಯವಾದ ಕಾಲವು ಬಂದಿತು. ನಾನು ಪಟ್ಟಿನ ವೇದನೆ ಸಹಿಸಲಾರೆ. ನಿನ್ನ ತಾಯಿಯನ್ನು ಆ ನೀಚನಾದ ದುರ್ಜಯನು ಅಪಹರಿಸಿರುವನು ಎಂದನು.

ಆಗ ಯುವಕನು ಕೋಪೋದ್ರೇಕಿತನಾಗಿ ತಂದೆಯನ್ನು ಕುರಿತು ನಿನ್ನನ್ನು ನೋಯಿಸಿರತಕ್ಕ ಆ ನೀಚನನ್ನು ನಿರ್ಮೂಲಮಾಡಿ ಅವರ ಮನೆಯನ್ನು ಸರ್ವನಾಶಕ್ಕೆ ಸೇರಿಸದಿದ್ದರೆ ನಿನ್ನ ಮಗನೇ ಅಲ್ಲ ಎಂದನು.

ಅವನ ತಂದೆಯ ಮುಖವು ವಿವರ್ಣವಾಯಿತು. ಅತನ ಪ್ರಾಣವು ವಾಯುವಿನಲ್ಲಿ ಲೀನವಾಯಿತು. ಆಗ ಯುವಕನು ತನ್ನ ತಂದೆಯ ಸಂಸ್ಕಾರಮಾಡಿ ತನ್ನ ಪ್ರತಿಜ್ಞೆ ನೆರವೇರಿಸಲು ಪ್ರಯತ್ನಿಸುತ್ತಿದ್ದನು.

ಅಧ್ಯಾಯ ೨

ಆಗಲೇ ಸೂರ್ಯನು ಪಶ್ಚಿಮ ಸಮುದ್ರವನ್ನು ಕುರಿತು ಹೋಗುತ್ತಿದ್ದಾನೆ. ದನಗಳು ಊರಿಗೆ ಹಿಂತಿರುಗುತ್ತಿವೆ. ಕತ್ತಲೆಯು ಲೋಕವನ್ನೆಲ್ಲಾ ಆವರಿಸಿಕೊಂಡಿದೆ. ಆಗ ಅತ್ತಿ ಸುಮಾರು ಎಂಟು ಘಂಟೆ ಆಗಿದೆ. ಯಾವನೊಬ್ಬ ಯುವಕನು ಉದ್ದವಾದ ಸಿಲುವಂಗಿಯನ್ನು ಹಾಕಿಕೊಂಡು ಕೈಲಿ ಬಾರು ಮಾಡಿದ ಹಿಸ್ತೂಲನ್ನು ಹಿಡಿದು ತಯಾರಿಸುತ್ತಿದ್ದಾನೆ. ಹೀಗೆಯೇ ಸುಮಾರು ಮೂರು ಘಂಟೆಗಳ ಕಾಲ ತಿರುಗಿದನು. ಪಟ್ಟಣವೆಲ್ಲಾ ನಿಶಬ್ದವಾಗಿದೆ.

ಆ ಯುವಕನು ಬಂದೂಕವನ್ನು ಹಿಡಿದು ಒಂದು ಮನೆಗೆ ನುಗ್ಗಿ ಅಲ್ಲಿದ್ದವರನ್ನು ಕೊಂದು ಕೋಮಲೆಯನ್ನು ಅಪಹರಿಸಿಕೊಂಡು ಹೋದನು. ಹೀಗೆ ಹೋಗುವಾಗ ಅವನು ಬೆಟ್ಟಗಳಿಂದಲೂ ಮುಳ್ಳುಗಿಡಗಳಿಂದಲೂ ಕೂಡಿದ ಸ್ಥಳದಲ್ಲಿ ಅವಳನ್ನು ಎತ್ತಿಕೊಂಡು ಹೋಗುತ್ತಿದ್ದನು. ಎರಡು ಬೆಟ್ಟಗಳ ನಡುವೆ ಒಂದು ದೊಡ್ಡ ಗವಿ ಇದೆ. ಅದರ ಮುಂದುಗಡೆ ವಿಶಾಲವಾದ ಐದಾರು ಜನ ಕುಳಿತುಕೊಳ್ಳುವ ಜಗಲಿ ಇದೆ. ಅದನ್ನು ಹಾದು ಹೋದರೆ ಅದನ್ನು ಯಾರೂ ದಾಟಲಾರದ ಷಟ್ಟ ಜಗಲಿ ಆಳಗಳಿಂದ ಕೂಡಿದ ಒಂದು ದೊಡ್ಡ ಕಂದಕವಿದೆ. ಆ ಕಂದಕದ ಸುತ್ತಲೂ ಮುಳ್ಳುಕಲ್ಲು ಒಂಡೆಗಳೂ ಬೇಲಿಗಳೂ ಇವೆ ಇದರ ಒಳಗಡೆ ಅತಿ ಸುಂದರವಾದ ಒಂದು ಮನೆಯಿದೆ. ಅದರ ಪಕ್ಕದಲ್ಲಿ ಬೆಳಕಿಲ್ಲದೆ ಗಾಳಿ ಸಂಚಾರವಿಲ್ಲದೆ ಇರುವ ಒಂದು ಕೋಣೆ ಇದೆ. ಅಲ್ಲಿ ನಮ್ಮ ಚಿರಪರಿಚಿತರಾದ ಬಾಲಿಕೆಯರು (ಕೋಮಲೆ, ರತ್ನಕಲೆ) ಇರುವುದು.

ವಾಚಕನು ಹೇಳಬೇಕಾಗಿಲ್ಲವೇ ಆ ಪುರುಷನಾರೆಂಬುದನ್ನು ಒಲ್ಲಿರಾ? ಅವನೇ ನೀಚನಾದ ದುರ್ಜಯನು.

ಅಧ್ಯಾಯ ೩

ಹೀಗೆ ಸುಂದರೇಶನು ತಾಯಿಯನ್ನೂ ಸ್ನೇಹಿತೆಯನ್ನೂ ಹುಡುಕಲು ಕಾರಣವಾಗಿ ತನ್ನ ಸೇವಕನಾದ ಕುಯಿನನ್ನು ಕರೆದು ತಿಪನನ್ನು ಎಬ್ಬಿಸಿ ಹಾಕಿ ಅವನು ಧೈರ್ಯವನ್ನು ಧೈರ್ಯವನ್ನು ಹಾಕಿಕೊಂಡು ಸುಮಾರು ೧೨ ಘಂಟೆ ಸಮಯ

ಹಿಂದೂದೇಶ

ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಅರೂವರೆ ಸಾವಿರ ಸಿವಿಕ್ ಗಾರ್ಡ್‌ಗಳಿರುತ್ತಾರೆ

ತಿರುವೆಂಕಯಿಸೆಲ್ಲೂರಿನಲ್ಲಿ ಒಬ್ಬ ಲೇವಾದೇವಿ ಮಾಡುವವನ ಹತ್ತಿರ ಇದ್ದ 1೫೦ ರೂಪಾಯಿ ಮೌಲ್ಯದ ಕಾಲಾಣೆಗಳು ಹಿಡಿಯಲ್ಪಟ್ಟವು.

ವಿಶ್ವವಿದ್ಯಾಲಯಗಳಲ್ಲಿ ಸ್ಪೆಷಲ್ ವಿಮಾನದಾಳಿ ಕರಗತ ಸ್ಥಾಪಿಸಲು ಒಂದು ಯೋಜನೆಯು ಬಂಗಾಳಾ ಸರಕಾರದಿಂದ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ತಿಳಿಸಲ್ಪಟ್ಟಿದೆ.

ಮದ್ರಾಸಿನ ಅಬ್ದುಲ್ ರಹಿಮಾನ್ ಎಂಬುವನು ಅಂಗಡಿಯಲ್ಲಿ 35 ಚೀಲ ಗೋಧಿ ಶೇಖರಿಸಿಟ್ಟಿದ್ದನ್ನು ಪೋಲೀಸಿನವರು ಸಶಪಡಿಸಿಕೊಂಡು ಅವನನ್ನು ದಸ್ತಗಿರಿಮಾಡಿರುವರು.

ತಿರುಚನಾಪಳ್ಳಿಯ ವಿವಿಧ ಭಾಗದಲ್ಲಿ ಚಿಲ್ಲರೆ ನಾಣ್ಯವನ್ನು ಕೊಳ್ಳುತಿಟ್ಟಿಕೊಂಡಿದ್ದ ಎಂಟು ಜನರು ದಸ್ತಗಿರಿಮಾಡಲ್ಪಟ್ಟರು.

ಬಂಗಾಳ ಮಿಲಿಟರಿ ಬೆಲೆ ಮತ್ತು ಆಹಾರಕ್ಕಾಗಿ ಗೋರಕಪುರದ ಅನೇಕ ಶಾಲೆಗಳು ಪರೀಕ್ಷೆಯನ್ನು ಮಜಾ ಮಾಡಿರುವರೆಂದು ತಿಳಿಯು ಬಂದಿದೆ.

ಪಂಜಾಬಿನ ಮುಖ್ಯ ಮಂತ್ರಿಗಳಾದ ಮೇಜರ್ ಮುಲ್ಲಿಕ್ ಮಹಮದ್ ಖಿಜರ್ ಹಯಾತ್‌ಖಾನರಿಗೆ ಚಕ್ರವರ್ತಿ ಸಾರ್ವಭೌಮರು ಅನರರಿ ಲೆಫ್ಟಿನೆಂಟ್ ಕರ್ನಲ್ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ.

ಮಿ|| ಜಿನ್ನಾರವರ ಪಾಕಿಸ್ತಾನ ಎಂಬ ಶಬ್ದ ಕೇಳಿ ಅಧಿಕಾರ ಹಿಂದೂಸ್ತಾನದವರು ಅಲ್ಲೂ ಪಾಕಿಸ್ತಾನ ಆಗಬೇಕೆನ್ನುತ್ತಾರಂತೆ! ನಾವೇತಕ್ಕೆ ಗೋನ, ಬೂನ, ಗೋಡಲ್ ಕನ್ನಾರ್‌ಗೆ ಯಾರನ್ನಾದರೂ ಕಳಿಸಬಾರದು

ಚೀನಾ ಭಾಷೆ

ಪ್ರಪಂಚದಲ್ಲಿ ಕಷ್ಟವಾದ ಭಾಷೆಯೆಂದರೆ ಚೀನಾ ಭಾಷೆ. ಚೀನರು ಮೊದಲು 1,100 ಅಕ್ಷರಗಳನ್ನು ಕಲಿಯಬೇಕು 550,000 ಮಾತಿವೆ. ಇವುಗಳ ಉಚ್ಚಾರಣೆ 400 ಮಾತ್ರ. ಇನ್ನಾವರೂ 45,00 00000 ಜನರಲ್ಲಿ 870,0000 ಜನರು ಮಾತ್ರ ಓದಬಲ್ಲರು. ಈ ಚೆಗೆ 1929-31 ರಲ್ಲಿ ಒಬ್ಬ ರಷ್ಯಾದವನು ಸೂತನ ರೀತಿಯಲ್ಲಿ (ನವ್ಯಂತೆ) ಓದುವುದನ್ನು ಕಲಿಸುತ್ತಿರುವನು. ಇದಕ್ಕೆ ಪ್ರಕಾರ್ಣಮಾಲೆ 28. ಇದನ್ನು ಯಾವ ಬಾಲಕನೇ ಆಗಲಿ ವಾರು ವಾರದಲ್ಲಿ ಕಲಿಯಬಹುದು. ಹಳೇ ರೀತಿಯ 5 000 ಮಾತುಗಳನ್ನು ಅನುವರಿಸಿದ ಟೈಪ್‌ರೈಟರ್ ಈಗ ಚೀನಾದಲ್ಲಿದೆ. ಒಂದು ಘಂಟೆಯಲ್ಲಿ 1 000 ಮಾತುಗಳಿಗಿಂತ ಹೆಚ್ಚಾಗಿ ಯಾವ ಟೈಪು ಮಾಡಲಾಗುವುದಿಲ್ಲ.

ಕುರುಡರಿಂದ ಸಹಾಯ

ಇಂಡಿಯಾದಲ್ಲಿ 60,000 ಕುರುಡರಿರುತ್ತಾರೆಂದೂ ಅವರೆಲ್ಲರೂ ಯುದ್ಧದಲ್ಲಿ ಫಾಯಗೊಂಡಿರುವವರಿಗೋಸ್ಕರ ತಮ್ಮ ರಕ್ತವನ್ನು ಕೊಡಬೇಕೆಂದೂ ಬ್ಲಡ್-ಬ್ಯಾಂಕ್ ಸೆಕ್ರೆಟರಿ ಮಿ|| ಎಂ. ಎಸ್. ರಾವ್ ಕೇಳಿರುವರು.

ಈಗ ತಕ್ಕಿರಾಜ್ಯವು "ತ್ರಿಶಂಕು" ವಾಗಿದೆ ಮಿ|| ಜಿನ್ನಾರವರು ತಮ್ಮ ಮುಂದಿನ ಭಾಷಣದಲ್ಲಿ "ತ್ರಿಶಂಕು" ತರ್ಕಿಯರನ್ನು ಹಿಂದೂ ಅಲ್ಲವೆನ್ನುತ್ತಾರೆಯೇ?

ಮಿ|| ರೂಸ್‌ವೆಲ್ಟರ ಪ್ರತಿನಿಧಿಯಾಡ ಮಿ|| ಫಿಲಿಪ್ಸ್‌ರೂ ಮಿ|| ಹೆನ್ನಾರವರೂ ಒಂದೇ ರೀತಿಯಾಗಿರುತ್ತಾರೆ. ಹೊಸಬರು ಯಾರಾದರೂ ಮೊದಲನೆಯ ಸಲ ನೋಡಿದರೆ ಇಂಥಾವರೇ ಎಂದು ಗುರುತು ಹಿಡಿಯುವುದು ಕಷ್ಟ.

ದಲ್ಲಿ ತನ್ನ ಮನೆಯನ್ನು ಭದ್ರಪಡಿಸಿ ಹೊಂಟನು. ಹೀಗೆ ಇವರು ಅನೇಕ ಸ್ಥಳಗಳನ್ನು ಹುಡುಕಿಕೊಂಡು ಒರುವಾಗ ಸ್ವಲ್ಪ ದೂರದಲ್ಲಿ ಕುದುರೆಗಳ ಸಪ್ಪಳವು ಕೇಳಿಬಂದಿತು. ಆಗ ತಿಪನು ತನ್ನ ಸೇವಕನನ್ನು ಮರದ ಮೇಲೆ ಹತ್ತಿಸಿ ತಾನು ದೂರದ ಮರದ ಮೇಲೆ ಹತ್ತಿ ಕೂತುಕೊಂಡನು ಹದಿನಾರು ಜನರು ಮುಖಕ್ಕೆ ಮುಸುಕು ಹಾಕಿಕೊಂಡು ಕರಿಯುದಾದ ದೊಡ್ಡ ನಿಲುವಂಗಿಯನ್ನು ಹಾಕಿಕೊಂಡು ಕುದುರೆ ಮೇಲೆ ಒರುತ್ತಿದ್ದರು. ಆಗ ಏಳು ಜನರು ಕೆಳಗಳಿದು ಇಟ್ಟಿದ್ದ ಮರದ ಬಳಿ ಕುಳಿತುಕೊಂಡು ಮಾತಾಡುತ್ತಿದ್ದರು.

ದುರ್ಜಯ—ನಾಳೆ ಏನು ಮಾಡಬೇಕು ಗೊತ್ತೋ?

ಚಂಡಾಲರು—ಏನು ನಾಳೆಯೆ, ಏನು ಮಾಡಬೇಕು?

ದುರ್ಜಯ—ನಾಳೆ ದಿನದ ರತ್ನಕಲೆ ಮನೆಯನ್ನು ದಹಿಸಬೇಕು.

ಚಂಡಾಲ—ಅಪ್ಪಣೆ.

ದುರ್ಜಯ—ಸಪ್ಪಳ ಆದೆ ವಿಚಾರಕೂಡದು. ಈಗಲೇ ನೀವೆಲ್ಲರೂ ಹೋಗಿ ಆ ಸುಂದರೇಶನನ್ನು ಕೊಂದು ಮನೆಯನ್ನು ದಹಿಸಿಬಿಡಿ ಎಂದು ಹೇಳಿ ಅವರಿಗೆ ಹತ್ತು [illegible] ಕೊಟ್ಟನು. ಇದನ್ನೇ ಗುಪ್ತವಾಗಿ ಕೇಳುತ್ತಿದ್ದ ಇವರಿ[illegible] ಸ್ಥಳದಿಂದ ಮಾಯವಾದರು. [ಸಶೇಷ

'ವಾಣಿ'ಯು ಕರ್ನಾಟಕದ ವಾಣಿಯಾಗಲಿ

ಲೇಖಕರು ; ಎಸ್. ವಿ. ಕೃಷ್ಣಸ್ವಾಮಿ, ಮೈಸೂರು

'ವಾಣಿ' ಯ ವಿಚಾರವನ್ನು ಬರೆಯಲು ನನಗೆ ಬಹು ಸಂತೋಷವಾಗುತ್ತದೆ. ಕನ್ನಡ ಚಿತ್ರಗಳೇ ಇಲ್ಲದಿದ್ದಾಗ, ಕನ್ನಡಚಿತ್ರಗಳಿಗೆ ಪರಭಾಷಾ ಚಿತ್ರಗಳಿಗೆ ಆಗುವ ಹಾಗೆ ಹಣ ಮತ್ತು ಪ್ರೋತ್ಸಾಹ ಕಡಮೆ ಎಂದು ತಿಳಿದು, ನಮ್ಮ ಕನ್ನಡ ಮಾತೆಯ ಒಂಡವಾಳಗಾರರು ಹೆದರುತ್ತಿದ್ದರು.

ಆದರೆ 'ಸಂಸಾರನೌಕ' ಚಿತ್ರಪಟ ನಿನಗಾದಿಂದ ಈಚೆಗೆ ಒಂದ 'ಪುರಂದರದಾಸ' 'ಚಿರಂಜೀವಿ' ಈ ಎರಡು ಪಟಗಳು ಅಪಜಯವನ್ನು ಹೊಂದಿ ನಮ್ಮ ನಿರ್ಮಾತೃಗಳಿಗೆ ಇನ್ನಷ್ಟು ಎದೆಗುಂದುವಂತೆ ಮಾಡಿತು. ಆದರೆ ಕನ್ನಡ ಮಾತೆಯ ಸುಯೋಗವೋ ಶ್ರೀ ವೀರಣ್ಣನವರ ಹಟಮಾರಿತನವೊ ಅವರು ತಂದ "ಸುಭದ್ರ" ಹಾಗು "ಜೀವನನಾಟಕ" ಎಲ್ಲಾ ಕನ್ನಡ ನಾಡಿನಲ್ಲೂ ಮತ್ತು ಪರಸಾಂತ್ಯದಲ್ಲಿ ಜಯಭೇರಿ ಹೊಡೆಯಲು ಈಗಲೀಗ ನಮ್ಮ ಬಂಡವಾಳಗಾರರು ಸರಿಯಾದ ರೀತಿಯಲ್ಲಿ ಚಿತ್ರವನ್ನು ಕನ್ನಡದಲ್ಲಿ ತಯಾರಿಸಿದರೆ ಅಪಜಯವಾಗಲಾರದೆಂಬ ಒಂದು ಭರವಸೆ ಹುಟ್ಟಿತು. ಇದಕ್ಕೆಲ್ಲಾ ಶ್ರೀ ವೀರಣ್ಣನವರ ಸಾಮರ್ಥ್ಯ ಮತ್ತು ಶ್ರಮವೇ ಆಗಿದೆ.

ವಾಣಿ ಚಿತ್ರದ ನಿರ್ಮಾಪಕರು ಈ ಜಲನ ಚಿತ್ರಕ್ಕೆ ಹೊಸಬರು, ಅದರಲ್ಲೂ ಮೈಸೂರಿನವರು. ಬಂಡವಾಳಗಾರರಿಂದ ಹಿಡಿದು ದಿಗ್ದರ್ಶನ ಹಾಗು ಪ್ರದರ್ಶನಾಧಿಕಾರಿಗಳ ವರೆಗೂ ಅಚ್ಚ ಮೈಸೂರಿನ ತರುಣರು. ಇದರಲ್ಲಿ ಸಂಗೀತದಿಕ್ಷ ಶ್ರೀ ಚೌಡಯ್ಯನವರು ಪ್ರಧಾನ ಪಾತ್ರಗಳಾಗಿಯೂ ಹಾಗು ಸಂಗೀತ ನಿರ್ದೇಶಕತ್ವದ ಭಾರ ಹೊತ್ತಿರುವುದು ಚಿತ್ರಕ್ಕೆ ಮತ್ತಷ್ಟು ಹುರುಪು ಕೊಟ್ಟಿದೆ.

ಅಭಿನಯದ ರಾಣಿ ಎಂದು ಹೆಸರು ಪಡೆದಿರುವ ಶ್ರೀಮತಿ ಬಳ್ಳಾರಿ ಲಲಿತ ಜಲನ ಚಿತ್ರ ಪ್ರಪಂಚಕ್ಕೆ ಹೊಸಬಳಲ್ಲ. ಆಕೆಯು ಅನೇಕ ಜಲಗು ಚಿತ್ರಗಳಲ್ಲಿ ಪಾತ್ರ ವಹಿಸಿ ಹೆಸರು ಪಡೆದಿದ್ದಾಳೆ. ಶ್ರೀ ಹಿರಣ್ಣಯ್ಯನವರ ಮಿತ್ರಮಂಡಲಿಯಲ್ಲಿ ಅನೇಕ ವೇಳೆ ರಂಗವಂಟರದಲ್ಲಿ ಕಾಣಿಸಿಕೊಂಡಿದ್ದಾಳೆ. ಒಳ್ಳೆ ನರ್ತಕಿ ಸಟಿ. ಆಯಕಟ್ಟಾದ ವೈಯ್ಯಿ. ಸುಂದರವಾಗಿಯೂ ಇದ್ದಾಳೆ ಸಂಗೀತಡಲ್ಲಿಯೂ ಪಾಂಡಿತ್ಯ. ಈಕೆಯನ್ನು ಜೀವನ ನಾಟಕದ ಜಯಮ್ಮನಿಗೆ ಹೋಲಿಸಬಹುದು

ಈ ಚಿತ್ರಪಟದಲ್ಲಿ ಕಲ್ಚರ್ಡ್ ಕಮೆಡಿಯನ್ ಹಿರಣ್ಣಯ್ಯನವರು ಪಾತ್ರ ವಹಿಸುವರು. ಹಾಗು ಕಥಾಲೇಖಕರು. ಇವರು ಹಾಸ್ಯಶಿಖಾಮಣಿ ವೀರಣ್ಣನವರ ಸರಿಸಮಾನ. ಇವರನ್ನರಿಯದ ರಂಗಪ್ರೇಮಿಗಳಿಲ್ಲ. ಇದರ ದಿಗ್ದರ್ಶಕತ್ವದ ಜವಾಬ್ದಾರಿಯನ್ನು ಶ್ರೀ ಎಂ. ಎಸ್. ಗೋಪಾಲ್‌ರವರು ವಹಿಸಿದ್ದಾರೆ. ಇವರೂ ಸಹ ಮೈಸೂರಿನವರು ಶ್ರೀ ಪಣ್ಣ ಎಲೆಕ್ಟ್ರಿಕ್ ಫೋಟೋ ಸ್ಟುಡಿಯೋದ ಮಾಲೀಕರು. ಇವರಿಗೆ ಚಲಚಿತ್ರದಲ್ಲಿ ಅಷ್ಟು ಪರಿಶ್ರಮವಿಲ್ಲದಿದ್ದರೂ ಶ್ರೀ ಹಿರಣ್ಣಯ್ಯನವರ ಮಿತ್ರಮಂಡಲಿಯವರು ಆಡುತ್ತಿದ್ದ ಅನೇಕ ನಾಟಕಗಳಿಗೆ ಇವರ ಸಲಹೆಗಳು ನಡೆಯುತ್ತಿದ್ದುದರಿಂದ ಅವರ ನಾಟಕಗಳು ಅಷ್ಟು ಕಳೆ ಕಟ್ಟುತ್ತಿದ್ದುದು. ಇವರು ಇತರ ಸಹಾಯಕ ದಿಗ್ದರ್ಶಕರ ಸಹಾಯದಿಂದ ತಮ್ಮಲ್ಲಿ ಅವರಿಗಿರುವ ದಿಗ್ದರ್ಶನ ಕಲೆಯನ್ನು ಹೊರಗೆಡಹಿ ಚಿತ್ರವನ್ನು ಯಶಸ್ವಿ ಮಾಡಲು ಪ್ರಯತ್ನಪಡುತ್ತಿರುವುದಲ್ಲದೆ ತಾವು ತಮ್ಮ ದಿಗ್ದರ್ಶನದ ಸ್ಥಾನವನ್ನು ಕಲ್ಪಿಸಿಕೊಳ್ಳಲು ಹವಣಿಸುತ್ತಿರುವರು.

ಚಿತ್ರದ ತಯಾರಿಕೆ ಕೊಯಮತ್ತೂರು ಸೆಂಟ್ರಲ್ ಸ್ಟುಡಿಯೋನಲ್ಲಿ ಇದೇ ಜನವರಿ ಮೊದಲನೆಯ ವಾರದಿಂದ ಭರದಿಂದ ಸಾಗಿರುವುದೆಂದು ತಿಳಿಯಬಂದಿದೆ. ಈ ಚಿತ್ರದಲ್ಲಿ ಶ್ರೀ ಅರಿಯಾಕುಡಿ ರಾಮಾನುಜಯ್ಯಂಗಾರ್ ಮತ್ತು ಇತರ ಹೆಸರಾದಂಥ ಸಂಗೀತ ವಿದ್ವಾಂಸರ ಹಿನ್ನಲೆ ಸಂಗೀತವಿರುವುದೆಂದು, ಮುಖ್ಯವಾಗಿ ಚೌಡಯ್ಯನವರು ಟಿಟಿಲು ಚಮತ್ಕಾರ ಈ ಚಿತ್ರಪಟದಲ್ಲಿ ಸಂಪೂರ್ಣವಾಗಿರುವುದೆಂದು ತಿಳಿದು ಬಂದಿದೆ.

ಒಟ್ಟಿನಲ್ಲಿ ಚಿತ್ರದ ಕಥೆ ಮತ್ತು ಸಂಭಾಷಣೆ ಹಾಗು ದಿಗ್ದರ್ಶಕತ್ವ ಅಷ್ಟಾಗಿ ನಾವು ನಿರೀಕ್ಷಿಸದಿದ್ದರೂ ಸಂಗೀತ ದೃಷ್ಟಿಯಿಂದ ಚಿತ್ರವು ಉತ್ತಮವಾಗಿರುವುದೆಂದು ಹೇಳಬಹುದು. ಇದರ ಪ್ರಕಟಣಾ ಕಾರ್ಯವನ್ನು "ಚಿತ್ರಪಟಾಚಾರ" ಪತ್ರಿಕೆಯ ಸಂಪಾದಕರಿಗೆ ಕೊಟ್ಟಿರುವುದರಿಂದ ಚಿತ್ರವು ಮತ್ತಷ್ಟು ಯಶಸ್ವಿಯಾಗಲು ಅನುಕೂಲವಾಗಿದೆ. ಒಟ್ಟಿನಲ್ಲಿ ನೈಜಂದಿನ ವರ ಉದ್ಯಮವು ಯಶಸ್ವಿಯಾಗಲಿ, ವಾಣಿಯು ಚಿರಾಯುವಾಗಿ ತಾಯಿನಾಡಿನಲ್ಲಿ ವಾಣಿಯಾಗಿ ಉಳಿಯಲಿ.

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಒಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಆಶೋಕಾ ರಸ್ತೆ — ಮೈಸೂರು

Marriage Gazette

The only illustrated monthly o urnal of its kind in India containing very interesting aud instructive articles on matrimonia-topics.

Apply....

The Indian Marriage Gazette

Bangaltre City

ವಿವಿಧ ವಿಷಯ

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ನಿಂದ ಟಿಂಗು ಈ ತಿಂಗಳು ೨೫ನೇ ತಾರೀಖಿನ ಬೆಳಗ್ಗೆ ೧೦॥ ಬೋರ್ಡ್ ಆಫೀಸಿನ ಕಟ್ಟಡದಲ್ಲಿ ನಡೆಯುವುದು.

ಂ ಂ ಂ ಂ

ಮೈಸೂರು ನಗರದ ವಸ್ತುಗಳ ಪ್ರದರ್ಶನವು ಈ ತಿಂಗಳು ೨೨ನೇ ತಾರೀಖಿನಿಂದ ೨೯ನೇ ತಾರೀಖಿನವರೆಗೆ ನಗರದ ಬೇರೆ ಬೇರೆ ಕೇಂದ್ರಗಳಲ್ಲಿ ನಡೆಯುವುದು. ೩೦ನೇ ತಾರೀಖು ಬಹುಮಾನ ವಿನಿಯೋಗವು ವಾಣೀವಿಲಾಸ ಗರ್ಭಿಣಿ ಮತ್ತು ಶಿಶುಸಂರಕ್ಷಣಾಲಯದಲ್ಲಿ ನಡೆಯುವುದು.

ಂ ಂ ಂ ಂ

ಯುದ್ಧದಲ್ಲಿ ಜಖಂ ಆದವರ ಸಹಾಯದ ಸಂಬಂಧದ ವಿಷಯವನ್ನು ಕುರಿತು ಪಬ್ಲಿಸಿಟಿ ಆಫೀಸರವರು ಒಂದು ಪ್ರಸಿದ್ಧ ಪತ್ರಿಕೆ ಹೊರಡಿಸಿದ್ದಾರೆ.

ಂ ಂ ಂ ಂ

ಶತ್ರುಪಕ್ಷದವರನ್ನು ಹಿಡಿದು ಕೊಡುವ ಮತ್ತು ಅವರನ್ನು ಬಂಧಿಸಲು ಅನುಕೂಲವಾಗುವ ಅತಿ ಮುಖ್ಯ ಸಂಗತಿ ತಿಳಿಸುವವರಿಗೆ ಇಂಡಿಯಾ ಸರಕಾರವು ಕೊಡಲು ಪ್ರಕಟಿಸಿರುವ ಬಹುಮಾನಗಳ ವಿವರಗಳನ್ನು ಪಬ್ಲಿಸಿಟಿ ಆಫೀಸರು ಪುನಃ ಪ್ರಕಟಿಸಿರುತ್ತಾರೆ.

ಂ ಂ ಂ ಂ

ಅಮೇರಿಕಾದ ಮಿಸ್ಸಿ ಮುರೆಯವರು, ಬ್ಲಾಕ್ ಮಾರ್ಕೆಟ್ ಹೆಚ್ಚುವುದು, ಸರ್ಕಾರದವರು ಫುಡ್ ಕಂಟ್ರೋಲ್ ಮಾಡಬಾರದು ಎನ್ನುವರು. ಈಗ ಸರ್ಕಾರದವರು ಹೆಚ್ಚುಹೆಚ್ಚಾಗಿ ಮಾರ್ಕೆಟ್‌ಗಳನ್ನು ಕಟ್ಟಿಸುತ್ತಿರುವರು. ಇವುಗಳ ಬಣ್ಣ ಬಿಳಿನೋ, ಕಪ್ಪುದೊ?

ಂ ಂ ಂ ಂ

ಕಲ್ಕತ್ತಾ ಸರ್ಕಾರಿ ಉದ್ಯಾನವನದಲ್ಲಿ ಒಂದು ಆಲದ ವೃಕ್ಷವಿದೆ ಇದರಷ್ಟು ಭಾರಿ ಮರವು ಪ್ರಪಂಚದಲ್ಲೆಲ್ಲೂ ಇಲ್ಲ. ಇದರ ವಯಸ್ಸು 160 ವರ್ಷ, ಇದರ ಸುತ್ತಳತೆ 1140' ಅಡಿ ಬುಡದ ಅಗಲ 51 ಅಡಿ. ಇದರ ಒಂದು ಕೊಂಬೆ 90 ಅಡಿ ಬೆಳೆದಿದೆ, ಇದರ ಇಳಲುಗಳು 647. ಇವೆಲ್ಲವೂ ಭೂಮಿಯಲ್ಲಿ ಬೇರೂರಿವೆ.

ಂ ಂ ಂ ಂ

ಅಕಿಯಾಬಿನಲ್ಲಿ ಬೊಂಬುಗಳು ವಿಶೇಷವಾಗಿ ಸಿಗುವುದರಿಂದ ಸೈನಿಕರಿಗೆ ಜೊಂಬುಗಳ ಒಟ್ಟನ್ನು ಕೊಡುತ್ತಿರುವರು.

LATEST NEWS

ರಾಷ್ಟವ್‌ನಲ್ಲಿ ರಷ್ಯನ್ನರು ಮುಂದುವರಿದು ಜರ್ಮನ್ ಲೈನನ್ನು ಭೇದಿಸಿರುತ್ತಾರೆ.

ಗುಡಲಕನಾರಿನಲ್ಲಿ ಅಮೇರಿಕನ್ನರು ಮುಂಗಡಗುತ್ತಿದ್ದಾರೆ.

ಈ ವರ್ಷದ ವಸಂತ ಋತುವು ಟರ್ಕಿಗೆ ಕಷ್ಟಕರವಾದುದೆಂದು ಮಿಲಿಟರಿ ಸಮಾಲೋಚಕರು ಅಭಿಪ್ರಾಯ.

ಅಹಂಬ್ರಹ್ಮ

ಬರೆದವನು—
"ನಾನು"

೩. ನಾನು ಯಾರು? (ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾನು ಯಾರು?

ನಾನು ಸರ್ವಾಂತರ್ಯಾಮಿಯು. ಯಾರಿಗೂ ಸಿಕ್ಕಿದವನಲ್ಲ; ಸಿಕ್ಕುವವನೂ ಅಲ್ಲ!

ನಾನು ನಿನ್ನಲ್ಲಿಯೇ ನೀನು ಅರಿಯದಂತೆ ಇರುವೆನು. ಆದುದರಿಂದ ನಿನ್ನನ್ನು ನೀನು ಅರಿಯದ ಹೊರತು ನನ್ನನ್ನು ನೀನು ಅರಿಯಲಾರೆ.

ಅನೇಕರು ನನ್ನನ್ನು ಅರಿತಿರುವರು ಅರಿತು ಅರಿಯಲಾರದವರು ಇನ್ನೂ ಅರಿತ್ತಲೇ ಇರುವರು. ಅರಿಯದೆ ಅರಿತವರೂ ಉಂಟು. ಅರಿತು ಅರಿಯಲಾರದವರು ಎಷ್ಟೋ! ಅರಿಯದವರ ಮಾತಿನ್ದೇಕೆ?

ನನಗಾಗಿ ನೀನು ಅಲೆದಾಡುವ ಅವಶ್ಯಕತೆಯಿಲ್ಲ; ಹುಡುಕಾಡುವ ಗಡಿಬಿಡಿಯಿಲ್ಲ. ನಾನು ನಿನ್ನ ಸವಿಾಸದಲ್ಲಿಯೇ ಇರುವೆನು. ನಿನ್ನಲ್ಲಿಯೇ ಮನೆಮಾಡಿಕೊಂಡಿರುವೆನು. ನಿನ್ನ ಮನೋಮಂದಿರದಲ್ಲಿಯೇ ಸಲಿದಾಡುತ್ತಿರುವೆನು.

ನಾನು ನಿನಗೆ ಪರಮಾಪ್ತನು. ಯಾವಾಗಲೂ ನಿನಗೆ ಒಳ್ಳೆಯದನ್ನೇ ಬಯಸುವೆನು. ಸರ್ವದಾ ನಿನ್ನ ಹಿತಚಿಂತನೆಯನ್ನೇ ಮಾಡುತ್ತಿರುವೆನು.

ನಾನು ಶ್ರೀಮಂತನು. ನನ್ನಲ್ಲಿ ಬೇಕಾದಷ್ಟು ಐಶ್ವರ್ಯವಿರುವುದು. ಎಷ್ಟು ಕೊಟ್ಟರೂ ಬರಿದಾಗುವಂತಿಲ್ಲ! ಅಂತಹ ಅಕ್ಷಯ ಭಂಡಾರವದು.

ನನ್ನ ಹಾಗೆ ಕೊಡುವವರು ಮತ್ತಾರಿದ್ದಾರೆ? ಬೇಡಿದವರಿಗೆ ಬೇಡಿದಷ್ಟು ಕೊಡುವೆನು. ಬೇಡದವರಿಗೂ ಕೊಡುವೆನು. ಆದರೆ ಬೇಡಿದವರಿಗೆ ಕೊಡದೆ ಬಿಡುವವನೇ ಅಲ್ಲ!

ನನ್ನಲ್ಲಿ ಇಲ್ಲವೆಂಬ ಮಾತೇ ಇಲ್ಲ. ಇಂದಲ್ಲದಿದ್ದರೂ ನಾಳೆಯಾದರೂ ಕೊಡುವೆನು. ನೀನು ಕೇಳಿದಷ್ಟಕ್ಕಿಂತಲೂ ಹೆಚ್ಚಾಗಿಯೇ ಕೊಡುವೆನು.

ಕೊಟ್ಟುದನ್ನು ಹಿಂದಕ್ಕೆ ಪಡೆಯುವುದರಲ್ಲಿಯೂ ಅಷ್ಟೇ! ಕೊಡುವಾಗ ಒಂದಕ್ಕೆ ಹತ್ತರಷ್ಟು ಕೊಡುವೆನು. ತೆಗೆದುಕೊಳ್ಳುವಾಗ ಹತ್ತಕ್ಕೆ ನೂರಾಗಿ ತೆಗೆದುಕೊಳ್ಳುವೆನು.

ಒಂದು ಕುರುಡು ಕಾಸಿಗೂ ನಾನು ಸೋಲುವವನಲ್ಲ. ಒಂದು ಹುಲ್ಲು ಕಡ್ಡಿಯನ್ನೂ ಬಿಟ್ಟುಕೊಡುವವನಲ್ಲ. ಎಷ್ಟು ಕಾಲವಾದರೂ, ಎಷ್ಟೇ ಕಷ್ಟವಾದರೂ ಕೊಟ್ಟೇ ಮುಗಿಯಬೇಕು. ಬಡ್ಡಿ ಬಡ್ಡಿಗೆ ಬಡ್ಡಿ ಬಡ್ಡಿಗೆ ಚಕ್ರಬಡ್ಡಿಯನ್ನು ಸಹ ತೆಗೆದುಕೊಂಡು ಬಿಡುವೆನು!

ನನಗೆ ಮರವೆಯೆಂಬುದೇ ಇಲ್ಲ. ನೀನು ಮರೆತರೂ ನಾನು ಮರೆಯುವವನಲ್ಲ. ನೀನು ತೆರೆಯಮರೆಯಲ್ಲಿರುವೆ. ನಾನಾದರೋ ಮರೆಯುನ್ನ ತೆರೆಯುವವನು!

ನನ್ನಂತಹ ಕರುಣಿಯೂ ಇಲ್ಲ; ನನ್ನಂತಹ ನಿಷ್ಕರುಣಿಯೂ ಇಲ್ಲ!

ಕೇಳಿದುದನ್ನೆಲ್ಲಾ ಕೈಗೆ ಕೊಡುವೆನು; ಬೇಡವಾದುದನ್ನೆಲ್ಲಾ ಬೆನ್ನಿಗೆ ಕಟ್ಟುವೆನು:

ಬೇಡಬಾರದುದನ್ನು ಬಿಡಲಾರದೆ ಒಡಬಡಿಸುತ್ತಿರುವೆ; ಬೇಡಬಾರದುದನ್ನು ಬೇಡಿಬೇಡಿ ಬಾಯಿಬಾಯಿ ಬಿಡುತ್ತಿರುವೆ!

ನಿನಗಾಗಿ ನಾನೊಂದು ಸುಂದರ ಮಂದಿರವನ್ನು ನಿರ್ಮಿಸಿದೆನು ನಿನ್ನ ಆಗಮನವನ್ನು ನಿರೀಕ್ಷಿಸಿ ಬಹಳ ಹೊತ್ತು ಅಲ್ಲಿಯೇ ಕಾದಿದ್ದೆನು. ನೀನು ಒಲವೇ ಇಲ್ಲ. ನಿನ್ನ ಸಂಚಾರವು ಮುಗಿಯಲೇ ಇಲ್ಲ. ಕಾಲಗತಿಯಿಂದ ಮನೆಯು ಮುರಿದುಬಿದ್ದುದರಿಂದ ನಾನು ಹಿಂತಿರುಗಿ ಬರಬೇಕಾಯಿತು.

ಎಷ್ಟೋ ಮನೆಗಳನ್ನು ಕಟ್ಟಿದೆನು. ಕಾದುಕಾದು ಬೇಸತ್ತು ಹೋಗಿರುವೆನು. ಎಷ್ಟೋ ಜನಗಳಿಗಾಗಿ ಕಾದೆನು ಕೆಲವರು ಬಂದರು. ಒಬ್ಬೇಕೆನ್ನುವಷ್ಟರೊಳಗೆ ಒಂದು ಹೋದವರು ಕೆಲವರು. ಬಾರದೆ ಇದ್ದವರು ಹಲವರು. ಅವರಲ್ಲಿ ನೀನೂ ಒಬ್ಬ! ನಿನಗಾಗಿ ನಾನಿನ್ನೂ ಕಾಯುತ್ತಲೇ ಇರುವೆನು!

ನಿನಗೆ ಕೆಲಸ ಬಹಳ! ಒಂದು ಕಡೆ ಸುಸಾರದ ಚಿಂತೆ; ಹೆಂಡಿರು ಮಕ್ಕಳ ಚಿಂತೆ; ವ್ಯವಹಾರದ ಚಿಂತೆ; ನೌಕರಿಯ ಚಿಂತೆ! ಅಯ್ಯೋ ಪಾಪ! ಈ ಚಿಂತೆಯು ಸಂತೆಯು ಗಲಾಟೆಯಲ್ಲಿ ನಿನಗೆ ನನ್ನೊಡನೆ ಮಾತನಾಡುವುದಕ್ಕೆ ಸಹ ಅವಕಾಶವಿಲ್ಲ. ಮಾಡುವುದೇನು?

ನನ್ನನ್ನು ಬೇಕಾದಾಗ ನೀನು ಬರಮಾಡಿಕೊಳ್ಳಬಲ್ಲೆನು. ಆದರೆ ನನಗೆ [illegible]ದೇ ಇಲ್ಲ. ಆದುದರಿಂದ ನಾನಿನ್ನು ನಿನಗಾಗಿ ಕಾದುಕೊಂಡೇ ಇರುವೆನು!

(ಮುಂದುವರಿಯುವುದು)

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಯತ್ನಕಾರ್ಯಗಳು ಅನುಕೂಲಿಸುವುವು. ಪತ್ನಿಯ ಪ್ರೇಮವೂ ಬಂಧು ಮಿತ್ರರ ಸಹಾಯವೂ ಇದೆ. ದುಡ್ಡಿನ ತಾಪತ್ರಯ ತಗ್ಗುವುದು. ಆರೋಗ್ಯ ಸ್ವಲ್ಪ ಕೆಟ್ಟೀತು.

ವೃಷಭ

ಹಣಕಾಸಿನ ಮತ್ತು ಸಂಸಾರದ ಚಿಂತೆ ನಿಮ್ಮನ್ನು ಪೀಡಿಸುವುದು. ಧೈರ್ಯದಿಂದಲೂ ತಾಳ್ಮೆಯಿಂದಲೂ ಕಾರ್ಯತತ್ಪರರಾಗಿದ್ದರೆ ಎಲ್ಲಾ ಸರಿ ಹೋಗುತ್ತೆ.

ಮಿಥುನ

ಆರೋಗ್ಯ ವಿಷಯದಲ್ಲಿ ಎಚ್ಚರದಿಂದಿರಿ. ಹಣಕಾಸಿನ ಮತ್ತು ಕೆಲಸ ಕಾರ್ಯಗಳ ವಿಷಯ ಅಷ್ಟು ಹಿತಕರವಿಲ್ಲ. ಮಂಗಳಕಾರ್ಯದಲ್ಲಿ ಭಾಗವಹಿಸುವಿರಿ.

ಕರ್ಕಾಟಕ

ನಿಮ್ಮ ಯೋಗ್ಯತೆ ನಿಮಾರಿ ಇಲ್ಲದ ತಾಪತ್ರಯ ಕಟ್ಟಿಕೊಳ್ಳಲು ಹೋಗುತ್ತೀರಿ. ಹಣದ ಚಿಂತೆ ಆವರಿಸಿದೆ. ಸ್ಥಿತಿಗತಿಗಳು ಉತ್ತಮಗೊಳ್ಳುವುವು.

ಸಿಂಹ

ನಿಮಗೆ ಅನುಕೂಲಗಳು ಒದಗುವುವು. ನೌಕರಿ ಉದ್ಯೋಗದಲ್ಲಿ ಒಳ್ಳೇ ಲಾಭ. ಸ್ವಪರಜನರ ಸಹಾಯ ಸಹಾನುಭೂತಿ ಕಡಮೆ ಇಲ್ಲ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು.

ಕನ್ಯಾ

ದೇವತಾಗುರು ಸೇವಾ ಫಲ. ಅಕಸ್ಮಾತ್ ಧನ ಸಹಾಯ, ಕೆಲಸಕಾರ್ಯಗಳು ಅನುಕೂಲ ಒದಗುವುದು. ಮಂಗಳ ಕಾರ್ಯದಲ್ಲಿ ಭಾಗವಹಿಸುವಿರಿ.

ತುಲಾ

ಈ ವಾರ ನೀವೇನು ತಳಬೇಕಾಗಿಲ್ಲ ತಕ್ಕಮಟ್ಟಿಗೆ ಸುಖ ಸಂತೋಷ ಒದಗುವುದು. ಮಂಗಳ ಕಾರ್ಯದಲ್ಲಿ ಭಾಗವಹಿಸುವಿರಿ.

ವೃಶ್ಚಿಕ

ಮನಸ್ಸಿನಲ್ಲಿ [illegible], ಉತ್ಪತ್ತಿಗಿಂತ [illegible] ಸಂಸಾರದಲ್ಲಿ ಮನಸ್ತಾಪ.

ಧನು

ವ್ಯಯಾಧಿಕ, ಶತ್ರು ಪೀಡೆ, ಹಣಕಾಸಿನ ಸ್ಥಿತಿ ಶಕ್ಯವಾಷ್ಟಿಗಿರುತ್ತದೆ. ಅನಾರೋಗ್ಯ.

ಮಕರ

ನೌಕರಿ ಉದ್ಯೋಗ ಉತ್ತಮಗೊಳ್ಳುವುದು. ಸಂಸಾರ ಸುಖ ಕಡಮೆ. ಹಣಕಾಸಿನ ಚಿಂತೆ ಇದ್ದರೂ ಆರ್ಥಿಕ ಬಿಕ್ಕಟ್ಟು ಸ್ವಲ್ಪ ವಾಟ್ಟಿಗೆ ಸಡಲಿಸುವುದು.

ಕುಂಭ

ಬಂಧುಮಿತ್ರರಿಂದ ಮನಸ್ಸಿಗೆ ವ್ಯಾಕುಲವಾಗುವುದು. ಸಂಚಾರ, ವ್ಯಯಾಧಿಕ ಆದರೂ ಜನರಲ್ಲಿ ಮನ್ನಣೆ ಇರುವುದು.

ಮೀನ

ನಿಮ್ಮ ಸ್ಥಿತಿಗತಿಗಳು ಬಹುಮಟ್ಟಿಗೆ ಉತ್ತಮಗೊಳ್ಳುವುವು. ಕೀರ್ತಿ ಗೌರವ ಹೆಚ್ಚಿ ಸಾಂಪತ್ತಿಕ ಸ್ಥಿತಿ ಸುಧಾರಿಸುವುದು.

— ಗುಲ್ಮ —

ಎಲ್ಲಾ ತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು, ಎದೆಉರಿ, ಪಕ್ಕಶೂಲೆ, ವಾಂತಿ, ಬಾಯಿ ನೀರು) ಇವುಗಳಿಗೆಲ್ಲಾ ನಮ್ಮಲ್ಲಿ ಖಾತ್ರಿಯಾದ ಔಷಧಿ ದೊರೆಯುತ್ತದೆ.

ಅಪೇಕ್ಷಿಸಿದವರು ಚಿಕ್ಕ ಚಿಕ್ಕ ಗಲನ್ನು ಕಳುಹಿಸಿ 0-1-6 ಸ್ಟಾಂಪಿನೊಡನೆ ಒರೆಯಿರಿ.

ಎಸ್. ಲಿಂಗೇಗೌಡ,
ಕುರುಬರ ಬೀದಿ, ಕೊಳ್ಳೇಗಾಲ.

WONDERFUL REMEDY.
for all Digestive Troubles

A speciality in gastric ulsers, duedamal ulcers. Radical cure guaranteed. Apply to—

S. Lingai Gowda
Kurubar Street, Kollegal.

ಉತ್ತಮ ಕಾಫೀ

ಸುವಾಸನೆ! ಅತ್ಯಂತ ರುಚಿ!

ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!
ಕೊಳ್ಳೇಗಾಲ

For good printing
Saraswati Printing Press
Lansdowne Buildings, Mysore

Lakshminarasimha Press
Srirampet, Mysore

ಟ್ರಂಕ್ ಟೆಲಿಫೋನ್

ಹಿಟ್ಲರ್ ಮತ್ತು ಮುಸೋಲಿನಿ

ಮುಸೋಲಿನಿ— ಯಾರ್ರಫೊರಾರ್ ಏನು ಮಾತಾಡುತ್ತಾ ಇರೋದು ?

ಹಿಟ್ಲರ್— ಹೌದು, ನಾನು ಹಿಟ್ಲರ ಮಾತಾಡುತ್ತಾ ಇದ್ದೀನೆ.

ಮುಸೊ— ಈಚೀಚೆಗೆ ರಷ್ಯಾದಿಂದ ಒರುತ್ತಾ ಇರುವ ಸುದ್ದಿಗಳು ಯಾಕೋ ನನ್ನ ಮನಸ್ಸನ್ನು ಕಲಕುತ್ತಾ ಇದೆ. ಏನೋ ಒಂದು ತರಹ ಕಳವಳವುಂಟಾಗುತ್ತಾ ಇದೆ,

ಹಿಟ್ಲರ್— ರಷ್ಯನರೇನೋ ಒಳಳ್ ಫುಟಿಕರೇ ಹೌದು, ಆದರೂ ಕಳವಳಪಡುವಂತಹ ಪರಿಸ್ಥಿತಿ ಏನೂ ಉಂಟಾಗಿಲ್ಲ.

ಮು— ಆಫ್ರಿಕಾದಲ್ಲೂ ಆಷ್ಟೆ. ಎಲ್ಲಾ ನಮ್ಮ ಇಷ್ಟದಂತೆ ನಡೀತಾ ಇಲ್ಲ.

ಹಿ— ನೀವು ಯಾಕೋ ನಿಸ್ತ್ರಾಣರಾಗಿ ಗಾಬರಿ ಪಡುತ್ತಾ ಇರುವಂತೆ ತೋರುತ್ತೆ, ಆಷ್ಟೆ.

ಮು— ಹಾಗಲ್ಲ. ಈಗಿನ ಪರಿಸ್ಥಿತಿಗಳನ್ನು ನೋಡಿದರೆ ನಾವು ಯುದ್ಧದಲ್ಲಿ ಸೋತು ಹೋಗಬಹುದು, ಎಂದು ತೋರುತ್ತೆ.

ಹಿ— ಅಂತಿಮ ವಿಜಯವು ನನಗೆ ಸಿದ್ಧಿಸುವುದಿಲ್ಲ ಎಂಬ ಶಂಕೆ ನಿಮಗೆ ಉಂಟಾಗಲು ಕಾರಣವೇನು ?

ಮು— ಕಾರಣವೇ ? ರಷ್ಯಾದಲ್ಲೂ ಆಫ್ರಿಕಾದಲ್ಲೂ ಒಂದೇ ಸಮನಾಗಿ ನಾವು ಕದನದಲ್ಲಿ ಸೋಲುವುದಕ್ಕೆ ಆರಂಭವಾಗಿರುವಷ್ಟೆ?

ಹಿ— ಆ ತಾತ್ಕಾಲಿಕ ಸೋಲುಗಳ ವಿಷಯವಾಗಿ ಈಗ ಯಾವ ವಿಚಾರವನ್ನೂ ಮಾಡಬೇಡಿ.

ಮು— ಅದೇನೋ ಆಗಬಹುದು. ಆದರೆ ಇಲ್ಲಿ ಇಟಲಿಯಲ್ಲಿ ....

ಹಿ— ಏನು ಇಟಲಿಯಲ್ಲಿ ?

ಮು— ಒಳಳ್ ವಂಚಕ ಜನರೆಲ್ಲ ಯುದ್ಧ ನಿಲ್ಲಿಸಿ, ಸಂಧಿ ಮಾಡಿಕೊಳ್ಳುವಂತೆ ಒಳಾಂತರ್ಯಕ್ಕಾರ ಮಾಡುತ್ತಾ ಇದ್ದಾರೆ.

ಹಿ— ಅವರನ್ನೆಲ್ಲಾ ಯಾಕೆ ತೋಪುಗಳ ಬಾಯಿಗೆ ಕಟ್ಟಿಸಬಾರದು ?

ಮು— ಅಷ್ಟೊಂದು ಜನರಲ್ಲಿ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಹಿ— ಹಾಗಾದರೆ, ಅವರನ್ನೆಲ್ಲಾ ಜೈಲಿಗೆ ಹಾಕಬಹುದಷ್ಟೆ !

ಮುಸೊ— ಇಲ್ಲ, ಜೈಲಿಗೆ ಹಾಕುವುದಕ್ಕೂ ಆಗುವಂತಿಲ್ಲ ಅವರ ಸಂಖ್ಯೆ ಮಿತಿಮೀರಿ ಹೋಗಿದೆ. ಈ ಯುದ್ಧವಿರೋಧಿಗಳು ದಿನದಿನಕ್ಕೂ ಹೆಚ್ಚುತ್ತಾ ಇದ್ದಾರೆ.

ಹಿ— ಇದೂ ಆಗದೇ ಹೋದರೆ, ಅವರನ್ನು ಹಡೋಟಿಯಲ್ಲಿ ಇಟ್ಟುಕೊಳ್ಳುವ ಕೆಲಸವನ್ನು ನಮ್ಮ ಗುಪ್ತ ಪೋಲೀಸ್ ದಳ ಇದೆಯಲ್ಲ, ಗೆಸ್ಟಪೊ ಅದಕ್ಕೆ ಬಿಡಿ, ಅವರು ಸಮರ್ಥವಾಗಿ ಆ ತಕರಾರು ಮನುಷ್ಯರನ್ನೆಲ್ಲಾ ಸೊಲ್ಲೆತ್ತದಂತೆ ಮಾಡಿಬಿಡುತ್ತಾರೆ. ಆ ಕೆಲಸ ನಮಗಿರಲಿ.

ಮು— ಬೇಡ, ಬೇಡ, ಅವರ ವಿಚಾರದಲ್ಲಿ ಏನಾದರೂ ಮಾಡೋದಾಗುತ್ತೆ.

ಹಿ— ಹಾಗಿದ್ದರೆ, ನಿಮಗೇಕೆ ಈಗ ಇಷ್ಟೊಂದು ಕಳವಳ ? ಕಾರಣವೇ ಇಲ್ಲವಲ್ಲಾ !

ಮು— ನಾನೊಂದು ಪುಸ್ತಕವನ್ನು ಓದುತ್ತಾ ಇದ್ದೀನೆ. ಅದೇ ನನ್ನನ್ನು ಇಷ್ಟು ಕಳವಳಕ್ಕೀಡುಮಾಡಿರುವುದು. ನಿಮ್ಮ ಎಲ್ಲಾವೂ ದಕ್ಕಿಂತ.

ಹಿ — ಏನು, ಪುಸ್ತಕದಿಂದ ಕಳವಳ ? ಒಳ್ಳು ಜೆನ್ನಾಗಿದೆ. ಏನು ಹಾಗೆಂದರೆ, ಸ್ವಲ್ಪ ಜೆನ್ನಾಗಿ ವಿವರಿಸಿ ಹೇಳಿ.

ಮು— ಹೌದು ನಾನು ಈಗ ಓದುತ್ತಾ ಇದೇನಲ್ಲ ಆ ಪುಸ್ತಕದಲ್ಲಿ ಇರತಕ್ಕ ವಿಷಯಗಳು ನನ್ನನ್ನು ಮೀಲಿನಿಂದ ಮೇಲೆ ಛೇತಿಗೊಳಿಸುತ್ತಾ ಇವೆ.

ಹಿ— ಅದೇನು ಈಚೆಗೆ ಬರೆದಿರುವ ಪುಸ್ತಕವೋ, ಅಥವಾ ಹಿಂದಿನದೋ ? ಯಾರೋ ನಿಷ್ಕ್ರಾಂತಕರನ್ನು ಕೆದರಿಸಲು ಈಚೆಗೆ ಬರೆದಿರುವ ಪುಸ್ತಕವಾಗಿರಬಹುದು.

ಮು— ಅಲ್ಲ, ಅಲ್ಲ, ಅದು ಹಿಂದಿನ ಪುಸ್ತಕವೇ, ಈ ಯುದ್ಧ ಆರಂಭವಾಗುವುದಕ್ಕೆ ಎಷ್ಟೋ ವರ್ಷಗಳ ಹಿಂದೆ ಬರೆದಿದ್ದದ್ದು. ನಾನು ಅದನ್ನು ಮೊದಲೇ ಓದಿದ್ದೆ. .... ಅದು ಪ್ರಕಟವಾದಾಗ. ಆದರೆ ಈಗ ಬಹು ವಿಷಯ ದೃಷ್ಟಿಯಿಂದ ಓದುತ್ತಾ ಇದ್ದೇನೆ.

ಹಿ— ಆ ಪುಸ್ತಕದಲ್ಲಿ ಹೇಳಿರುವುದೇನು ಅಂಥಾದ್ದು ?

ಮು— ಬ್ರಿಟಿಷರು ಯಾವ ಯುದ್ಧದಲ್ಲಿಯೂ ಸೋಲಿಸಲ್ಪಡುವುದಿಲ್ಲ ಎಂದು ಬರೆದಿದೆ.

ಹಿ— ಶುದ್ಧ ಹುಡುಗಾಟಿಕೆ, ತಿಳಿಗೇಡಿತನ ಯಿಲ್ಲದ ಬರವಣಿಗೆ. ನನಗನು ಕೇಳಿದರೆ, ಆ ಪುಸ್ತಕದ ಪ್ರತಿಗಳನ್ನೆಲ್ಲಾ ತರಿಸಿಕೊಂಡಿದ್ದು ಬೆಂಕಿಹಾಕಿ ಅದನ್ನು ಬರೆದವರನ್ನು ಜೈಲಿಗೆ ಹಾಕಬೇಕು— ನೀವು ಹೇಳಿದಹಾಗೇನಾದರೂ ಅದರಲ್ಲಿ ಬರೆದಿರುವುದು ನಿಜವಾದರೆ.

ಮು—ನೀವು ಹೇಳುವಂತೆ ಗ್ರಂಥಕರ್ತನನ್ನು ನಾವು ಜೈಲಿಗೆ ಹಾಕುವುದಕ್ಕೆ ಆಗುವಂತಿಲ್ಲ.

ಹಿ—ಯಾಕೆ ಆಗೊಲ್ಲ ? ಜೈಲಿಗೆ ಹಾಕಲು ಇರುವೆ ಕಷ್ಟವೇನು ? ಅದು ಹಾಗಿರಲಿ, ಆ ಪುಸ್ತಕವೇನಾದರೂ ಬೇರೆ ಭಾಷೆಗೇನಾದರೂ ಭಾಷಾಂತರವಾಗಿದೆಯೋ ?

ಮು —ಭಾಷಾಂತರವೇಕೆ ? ಅದನ್ನು ಬರೆದು ಪ್ರಕಟಿಸಿರುವುದೇ ಜರ್ಮನ್ ಭಾಷೆಯಲ್ಲಿ. ಒಳ್ಳೆ ಭಾಷೆಯಿಂದ ಇತರ ಭಾಷೆಗಳಿಗೆ ತರ್ಜುಮೆ ಮಾಡಲ್ಪಟ್ಟಿದೆ.

ಹಿ— ಅಂದರೆ ಆ ಪುಸ್ತಕದ ಲೇಖಕ ಒಬ್ಬ ಜರ್ಮನನೇನು ?

ಮು—ಹೌದು, ಫ್ಯೂರರ್ !

ಹಿ—ಒಹಳ ಆಶ್ಚರ್ಯ ! ಒಹಳ ಆಶ್ಚರ್ಯ ! ಜರ್ಮನ್ ಭಾಷೆಯಲ್ಲಿ ಅಂತಹ ಪುಸ್ತಕ ಪ್ರಿಂಟಾಗಿ, ಅದು ವಿಚಾರ ನನಗೆ ಇನ್ನೂ ತಿಳಿಯದೆ ಇರುವುದೀಗ ನಿಜವಾಗಿ ಆಶ್ಚರ್ಯಕರವಾಗಿದೆ. ಆ ಪುಸ್ತಕದ ಹೆಸರೇನು ಹೇಳಿ [illegible].

ಸ್ತ್ರೀಚ್ಛೆಯ ರಕ್ಷಣೆಯೇ ಸ್ತ್ರೀಯರಿಗೆ ಒಂತವಾದದ್ದು

ಈ ವಿಷಯದಲ್ಲಿ ಪಾಶ್ಚಾತ್ಯ ದೇಶದ ಗ್ರಂಥಗಳು ಏನು ಹೇಳುವುವೆಂದರೆ—ಲಂಡನ್ ನಗರದಲ್ಲಿ ಪ್ರಚಾರಿತವಾದ " ಎಸ್ಸೇಸ್ ಆಫ್ ವಿಮೆನ್ಸ್ ವರ್ಕ್ " ಎಂಬ ಗ್ರಂಥದಲ್ಲಿ ಹೀಗೆ ತಿಳಿಸಿದೆ—

18 ಮತ್ತು 19 ನೇ ಶತಾಬ್ದಗಳಲ್ಲಿ ಔದ್ಯೋಗಿಕ ಕಾರ್ಖಾನೆಗಳು ಅಮಿತವಾಗಿ ಹೆಚ್ಚಿದ ಕಾರಣದಿಂದ ಲಾಭದ ಮೇಲಿನ ದೃಷ್ಟಿಯುಳ್ಳ ಕಾರ್ಖಾನೆಗಳ ಮಾಲೀಕರಿಗೆ ಕೂಲಿಗಾರರ ಆವಶ್ಯಕತೆಯು ಹೆಚ್ಚಿತು. ಆಗ ಅತಿ ಕಟ್ಟಿಲತೆಯಿಂದ ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯಹಾಗೂ ಸಮತೆಯ ಆಂದೋಳನವನ್ನು ಪ್ರಾರಂಭಿಸಿದರು. ವಿಶೇಷತಃ ಅವರಿಗೆ ವಿವಾಹಿತ ಸ್ತ್ರೀಯರ ಅವಶ್ಯಕತೆ ಹೆಚ್ಚು ಪ್ರಮಾಣದಲ್ಲಿತ್ತು. ಏಕೆಂದರೆ ಅವರಿಗೆ ಕೊಡುವ ಕೂಲಿಯು ಅವರು ಮಾಡುತ್ತಿದ್ದ ಕೆಲಸಕ್ಕೆ ಹೋಲಿಸಿದಲ್ಲಿ ಅತಿಸ್ವಲ್ಪವಾಗಿತ್ತು. ವಿವಾಹಿತ ಸ್ತ್ರೀಯರು ಮಾತೃಪ್ರೇಮಕ್ಕೆ ವಶೀಭೂತರಾಗಿ ಅತಿಶೀಘ್ರದಲ್ಲಿ ಒಂಡವಾಳಗಾರರ ಕೈಗೊಂಬೆಗಳಾಗಿ ಹೋಗಿಬಿಡುತ್ತಿದ್ದರು.

ಲಾರ್ಡ್ ಆಂಸ್ಲೆಯವರು ಒಂದು ಭಾಷಣದಲ್ಲಿ ಹೀಗೆ ತಿಳಿಸಿರುವರು—ಒಂದು ಕಾರ್ಖಾನೆಯವರು ನನಗೆ ಬರೆದಿರುವ ಒಂದು ಪತ್ರದಲ್ಲಿ ಹೀಗೆ ತಿಳಿಸಿರುವರು—ಕಾರ್ಖಾನೆಯ ಕಾರ್ಯದ ದೃಷ್ಟಿಯಲ್ಲಿ ನನಗೆ ಸ್ತ್ರೀಯರ ಆದರಲ್ಲಿಯೂ ವಿವಾಹಿತರಾದ ಸ್ತ್ರೀಯರ ಹೆಚ್ಚು ಉಪಯೋಗವಾಗುತ್ತಾರೆ. ಅವರು ನಿಷ್ಠೆಯೊಡನೆ ಕೆಲಸ ಮಾಡುವರು. ಈ ಗುಣದ ಕಾರಣದಿಂದ ಅವರು ಕಾರ್ಖಾನೆದಾರರ ಗುಲಾಮರಾಗಿ ಹೋಗಿರುವರು. ಅವರು ತಮ್ಮ ಆಸಕ್ತಿಯ ಕಡೆಗೂ ಲಕ್ಷ್ಯವಿಡದಿರುವರು.

" ಫೆಮಿನಿಸಂ ಅಟ್ ಫೈಂಡ್ಲಿಟು ವಿಮೆನ್ " ಎಂಬ ಗ್ರಂಥದಲ್ಲಿ ಆಂಥೊನಿ ಯಂ ಉಡ್ವಿಚ್ ಎಂಬುವರು ಏನು ಹೇಳಿರುವರೆಂದರೆ

" ಪ್ರಚಲಿತ ಸ್ತ್ರೀಹಿತವಾದವು ಅವರ ಇತಿಹಾಸಕ್ಕೆ ಒಂದು ಕಳಂಕವಾಗಿಯೇ ಇದೆ."

ಸುಧಾರಣೆಯ ಹೆಸರಿನಲ್ಲಿ ಸುಧಾರಕರ ಆಂದೋಳನಗಳಲ್ಲೊಂದಾದ ಸ್ತ್ರೀಯರ ಪುರುಷೀಕರಣವು ಸ್ತ್ರೀಯರಿಗೆ ಅಹಿತಕರವಾದುದಾಗಲಿ ಅವರ ಮೇಲ್ಮೆಗಾಗಿ ಎಂದು ಯಾವ ಸ್ತ್ರೀ ಜಾತಿ ಹಿತೈಷಿಯೂ ಹೇಳಲಾಗದು. (ಓ)

[ಯುವಕ ಸಂದೇಶದಿಂದ ಸಂಗ್ರಹಿಸಿದೆ]

ಮು—ನಾನು ಪುಸ್ತಕದ ಹೆಸರನ್ನು ಆಗಲೇ ಹೇಳಿದೆ, ಆದರೆ, ನಿಮಗೆ ಅದು ಕೇಳಿಸಲಿಲ್ಲವೋ ಏನೋ ?

ಹಿ—ಎಲ್ಲೊ ಟೆಲಿಫೋನಿನಲ್ಲಿ ಕೊಂಚ ತಪ್ಪಿರಬಹುದು. ಅದಕ್ಕೆ ನಿಮ್ಮ ಧ್ವನಿ ಕೂಡ ಅಷ್ಟು ಸ್ಪಷ್ಟವಾಗಿ ಕೇಳುತ್ತಾ ಇಲ್ಲ. ನಿಮೋ ಒಂದು ಏಭವಾಗಿ ಕೇಳಿಸುತ್ತದೆ. ಕೊಂಚ ಗಟ್ಟಿಯಾಗಿ ಮಾತಾಡಿ. ಆ ಪುಸ್ತಕ ಯಾವುದು ಹೇಳಿ.

ಮು—'ಮೀ ಕಾಂಫ್' — ಅಡೋಲ್ಫ್ ಹಿಟ್ಲರ್, ಎಂಬುವನು ಅದನ್ನು ಬರೆದಿದ್ದಾನೆ!

(ರಾ. ರ)

ಕರ್ಣಾಟಕದ ಹೆಮ್ಮೆಯ ಕನ್ನಡ ಚಿತ್ರ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು

ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಜಲ್ಲನಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ.

— ತಾರಾಗಣ —

ಶ್ರೀಮತಿ ಒಳ್ಳಾರಿ ಲಲಿತ, ಟಿ. ಎಸ್ ಚಂದ್ರ ಕುಮಾರಿ ರತ್ನ, ಪಂಡರೀಬಾಯಿ,
ಧನಭಲಗ್ಯಂ, ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್
ಬಿ. ವಿ. ಕೆ. ಮೂರ್ತಿ, ಬಿ. ಎಸ್ ಸೆಬ್ಬಯ್ಯ, ಎಂ. ಮಾಧವರಾವ್
ಹೆಚ್. ಆರ್ ಶಾಸ್ತ್ರಿ, ಎಂ. ಆರ್. ಪಿ. ಸಾರಥಿ.
ಶ್ರೀಮತಿ ಕೆ. ಆರ್. ಶಾಂತಿರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ

ಎದುರುನೋಡಿ

ನಿರ್ದೇಶಕರು— ಜಿ ಎಲ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ ಎಸ್. ತಿಪ್ಪಸನಸ್ವಾಮಿ
ಕ್ಯಾಮೆರಾ ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.
ಸ್ಟುಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

— ಹೆಚ್ಚಿನ ವಿವರಗಳಿಗೆ —

ಜಿ. ಆರ್. ರಾಮಯ್ಯ, ಮ್ಯಾನೇಜಿಂಗ್ ಏಜೆಂಟ್ಸ್, ಇವರಲ್ಲಿ ತಿಳಿಯಿರಿ.

H. R. G. C.'s Sree Pictures

GANDHI SQUARE, MYSORE

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ನಿರ್ಪ್ ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ
ಮತ್ತು ಬರುವ ಮೂಲಿಕೆಗಳ ವಿಶ್ರಣವಿಲ್ಲ
ಕ್ಷೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೈಪಿಂಗ್ ಲೆಜೊಕೇಟರಿ
ಮಲ್ಲೇಶ್ವರಂ, ಬೆಂಗಳೂರು.

Opera · Morning Show From 15-1-43

"DESTRY" DIETRICH IS AT IT AGAIN!

She makes a South Seas Typhoon look like a gentle breeze...as she takes over a lawless Pacific Paradise!



A UNIVERSAL PICTURE · Directed by TAY GARNETT

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ:

ಒಂದು, ತಿರ್ಫ, ಕಾಲು ಪೌಂಡಿನ, ಒಂದು ಸೇರು, ಬಂ[illegible] ಮಾರ್ಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ [illegible]ಡಿಕೆ ಪುಡಿಯು ಸುಪ್ರಸಿದ್ಧವಾಗಿದೆ.

ವಲ್ಲಭದಾಸ್ ತೇಜ್ ಪಾಲ್
ಗಳಿ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಹಾಲು ಪಾನೀಯಗಳು ನಮ್ಮಲ್ಲಿ ಒಂದು ವಿಶೇಷವೆನಿಸಿ

ಕೆನೆ, ಬೆಣ್ಣೆ, ಅತಿ ಮಧುರವಾದ ಕ್ರೀಮ್, ಇವುಗಳಿಗೆ

ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಪೋಸ್ಟ್ ಮಾಡಿ

ನಿವೇದಿತಾ ಡೈರಿ ಟೆಲಿಫೋನ್ ನಂಬರು 492
ಪೋಸ್ಟಾಫೀಸ್‌ರಸ್ತೆ, ಮೈಸೂರು